ಸಾಕ್ಷಿಗೆ ಕನ್ನಡ ಭಾಷೆ ಬರುವುದಿಲ್ಲ, ಮರಾಠಿ ಬರುತ್ತದೆ. ಶ್ರೀ.ವಿ.ವಿ.ಲಾಡ್, ವಕೀಲರಿಗೆ ಕನ್ನಡ ಮತ್ತು ಮರಾಠಿ ಭಾಷೆ ಬರುವ ಕಾರಣ ಅವರನ್ನು ಅನುವಾದಕರನ್ನಾಗಿ ನೇಮಿಸಲಾಯಿತು.

ದಿನಾಂಕಃ-24-02-2022 ರಂದು ಪುನಃ ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ-ಶ್ರೀ.ಎಮ್.ಜಿ.ಕೆ ವಕೀಲರಿಂದ ವಾದಿ ಪರವಾಗಿ**

- ವಾದಿಯರ ಕುಟುಂಬದ ಬಗ್ಗೆ ಮಾಹಿತಿ ಇದೆ. ಸದರಿಯವರಿಗೆ 3 ಜನ ಸಹೋದರಿಯರು ಹಾಗೂ 4 ಜನ ಸಹೋದರಿಯರು. ಸದರಿ 3 ಜನ ಸಹೋದರರು ಅಂದರೆ ರೂಪಚಂದ, ಬಾಲಚಂದ್ರ, ಶಾಂತಿಲಾಲ. ಸದರಿ 3 ಜನರ ನಡುವೆ ವಾಟ್ನಿ ಆದ ಬಗ್ಗೆ ನನಗೆ ಮಾಹಿತಿ ಇಲ್ಲ. ರೂಪಚಂದ, ಬಾಲಚಂದ್ರ, ಶಾಂತಿಲಾಲ ಇವರಿಗೆ ಒಬ್ಬ ಸಹೋದರಿ ಇದ್ದು ಅವರ ಹೆಸರು ಕುಸುಮಾ ಗಂ.ರಸೀಲಾಲ ಶಹಾ. ಮಾಣಿಕಚಂದ ಜೀವಂತ ಇರುವಾಗಲೇ 1961 ರಲ್ಲಿಯೇ ನೋಂದಾಯಿತ ವಾಟ್ನಿ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ವಾಟ್ನಿ ಪತ್ರದ ಮೂಲಕ ಈ ದಾವಾ ಆಸ್ತಿಯನ್ನು ಶಾಂತಿಲಾಲ ಮತ್ತು ಕುಸುಮಾಬಾಯಿಗೆ ಜಂಟಿಯಾಗಿ ಕೊಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಕುಸುಮಾ ಮತ್ತು ಶಾಂತಿಲಾಲ ಇವರ ನಡುವೆ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ವಾಟ್ನಿ ಆಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅದರ ಬಗ್ಗೆ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಶಾಂತಾಬಾಯಿಯವರ ತಂದೆಯ ಮೂಲಕ ಬಂದ ಸ್ವತ್ತು ಅಲ್ಲ ಎಂದರೆ ಸರಿ. ಶಾಂತಿಲಾಲ ತಮ್ಮ ಜೀವಿತಾವಧಿಯಲ್ಲಿ ಅವರ ಹೆಂಡತಿ ಶಾಂತಾಬಾಯಿಗೆ ಜೀವನಾಂಶದ ಬಾಪ್ತು ಸ್ವತ್ತು ಕೊಟ್ಟಿದ್ದಿಲ್ಲ ಎಂದರೆ ಸರಿ. ನಿಡಿ-3 ರಲ್ಲಿ ಸ್ವತ್ತು ಶಾಂತಾಬಾಯಿಯವರ ಸ್ತ್ರೀಧನ ಅಂತಾ ನಮೂದಿಸಿದ್ದು ತಪ್ಪು ಇದೆ ಎಂದರೆ ನನಗೆ ಗೊತ್ತಿಲ್ಲ. ಮೃತ್ಯು ಪತ್ರ ಬರೆಯುವ ಕಾಲಕ್ಕೆ ಅದು ಶಾಂತಾಬಾಯಿಯವರ ಸ್ತ್ರೀಧನ ಎಂಬ ಬಗ್ಗೆ ಹೇಳಿ ಬರೆಸಿದ ಬಗ್ಗೆ ನನಗೆ ಗೊತ್ತಿಲ್ಲ. ಸ್ವತಃ ಶಾಂತಾಬಾಯಿಯವರು ಸಹ ಅದು ಸ್ತ್ರೀಧನ ಅಂತಾ ಹೇಳಿಲ್ಲ. ಕುಸುಮಾಬಾಯಿಯದು ಸಹ ಅದರಲ್ಲಿ ಜಂಟಿ ಹಕ್ಕು ಇದೆ ಎಂದರೆ ಸರಿ. ಕುಸುಮಾಬೇನ ಈಗಲೂ ಜೀವಂತ ಇದ್ದಾರೆ ಎಂದರೆ ಸರಿ. ಕುಸುಮಾಬೇನ ಜೀವಂತ ಇರುವಾಗ ಶಾಂತಾಬಾಯಿಗೆ ಮೃತ್ಯು ಪತ್ರ ಮಾಡಲು ಏಕೈಕ ಹಕ್ಕು ಇಲ್ಲ ಎಂದರೆ ನನಗೆ ಅದರ ಬಗ್ಗೆ ಹೇಳಲು ಬರುವುದಿಲ್ಲ.

2. ನಿಡಿ-3 ಜಮಖಂಡಿಯಲ್ಲಿ ಮಾಡಿದ್ದು ಬರೆಯುತ್ತಿದ್ದ ಬಗ್ಗೆ ಮಾಹಿತಿ ಇತ್ತು. ಶಾಂತಾಬಾಯಿಯವರೇ ಮೃತ್ಯುಪತ್ರ ಮಾಡುವ 8 ದಿನದ ಮೊದಲು ನನಗೆ ವಿಷಯ ತಿಳಿಸಿದರು. ಮೃತ್ಯುಪತ್ರಕ್ಕೆ ಸಂಬಂಧಿಸಿದ ಯಾವುದೇ ಕಾಗದ ಪತ್ರಗಳನ್ನು ಮೃತ್ಯುಪತ್ರ ಮಾಡುವುದಕ್ಕಿಂತ ಮೊದಲು ತೋರಿಸಿಲ್ಲ. ಶಾಂತಾಬಾಯಿಯವರು ಮೃತ್ಯುಪತ್ರ ಬರೆಯುವ 8 ದಿನದ ಪೂರ್ವದಲ್ಲಿ ನನಗೆ ವಿಷಯ ತಿಳಿಸುವಾಗ ವಕೀಲರು ಇರಲಿಲ್ಲ. ವಕೀಲರ ವೈಯಕ್ತಿಕ ಪರಿಚಯ ಇಲ್ಲ. ನಿಡಿ-3 4 ಪುಟಗಳಲ್ಲಿ ಇದೆ ಎಂದರೆ ಸರಿ. ನಿಡಿ-3 ರಲ್ಲಿ 2 ಪುಟಗಳು ಹಸಿರು ಹಾಳೆಯಿಂದ ಇದ್ದು, ಇನ್ನೆರಡು ಪುಟಗಳು ಕಂದು ಬಣ್ಣದ್ದು ಮಸ್ಕಾದ ಬಣ್ಣದಲ್ಲಿ ಇವೆ. 4 ನೇ ಪುಟದಲ್ಲಿ ಎರಡು ಸ್ಥಳಗಳಲ್ಲಿ 15 ಅಂಕಿಗಳನ್ನು ಮತ್ತು ಜಮಖಂಡಿ ಅನ್ನುವ ಅಕ್ಷರವನ್ನು ಎರಡು ಕಡೆ ಪೆನಿನ್ನಿಂದ ಬರೆದಿದ್ದಾರೆ ಎಂದರೆ ಸರಿ. ಅದನ್ನು ಯಾರು ಬರೆದಿದ್ದಾರೆ ಗೊತ್ತಿಲ್ಲ. ಅದರ ಆಸು-ಪಾಸು ವಕೀಲರ ಸಹಿಗಳು ಇಲ್ಲ. ಶಾಂತಾಬಾಯಿಯವರ ಸಹಿಗಳು ಸಹಿತ ಇಲ್ಲ. ಶಾಂತಾಬಾಯಿ ಇವರಿಗೆ ಮರಾಠಿ ಭಾಷೆ ಹೊರತುಪಡಿಸಿ ಬೇರೆ ಭಾಷೆ ಬರುತ್ತಿರಲಿಲ್ಲ ಎಂದರೆ ಸರಿ. ಶಾಂತಾಬಾಯಿಯವರಿಗೆ ಆಂಗ್ಲ ಭಾಷೆ ಬರುತ್ತಿರಲಿಲ್ಲ ಎಂದರೆ ಸರಿ. ನಿಡಿ-3 ರಲ್ಲಿ ಶಾಂತಾಬಾಯಿಯವರಿಗೆ ಅದರಲ್ಲಿನ ವಕ್ಕಣೆಗಳನ್ನು ಓದಿ ಹೇಳಿ ತಿಳಿಸಿದ ಬಗ್ಗೆ ಅದರಲ್ಲಿ ಎಲ್ಲಿಯು ನಮೂದು ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನನಗೂ ಆಂಗ್ಲ ಭಾಷೆ ಬರುವುದಿಲ್ಲ. ನಿಡಿ-3 ರಲ್ಲಿ ಬರೆದಿರುವ ವಕ್ಕಣೆಗಳನ್ನು ಶಾಂತಾಬಾಯಿಯವರು ಓದಿ ಹೇಳಿದ್ದಾರೆ. ಶಾಂತಾಬಾಯಿ ಓದಿ ಹೇಳಿಲ್ಲ ಎಂದರೆ ಸರಿಯಲ್ಲ. ನಿಡಿ-3 ನ್ನು ತಯಾರಿಸಿದ ವಕೀಲರು ಸಹ ವಕ್ಕಣೆಗಳನ್ನು ಓದಿ ಹೇಳಿಲ್ಲ ಎಂದರೆ ಸರಿಯಲ್ಲ. ಓದಿ ಹೇಳಿರುತ್ತಾರೆ. ನನಗೆ ವಕೀಲರು ಹಿಂದಿ ಮತ್ತು ಮರಾಠಿ ಭಾಷೆಗಳಲ್ಲಿ ಅನುವಾದಿಸಿ ಹೇಳಿದ್ದಾರೆ. ನಿಡಿ-3 ರಲ್ಲಿನ ನನ್ನ ಸಹಿಯನ್ನು ಶಾಂತಾಬಾಯಿಯವರ ಸಮಕ್ಷಮ ಮಾಡಿಲ್ಲ ಎಂದರೆ ಸರಿಯಲ್ಲ. ಸುಜೀತ ಶ್ರೀಕಾಂತ ಶಹಾರವರು ಸಹ ನನ್ನ ಮತ್ತು ಶಾಂತಾಬಾಯಿಯವರ ಸಮಕ್ಷಮ ಸಹಿ ಮಾಡಿದ್ದಾರೆ. ಶಾಂತಾಬಾಯಿ ನನ್ನ ಸಮಕ್ಷಮ ನಿಡಿ-3 ಕ್ಕೆ ಸಹಿ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-3 ಕ್ಕೆ ಶಾಂತಾಬಾಯಿಯವರು ಸಹಿ ಮಾಡಿಲ್ಲ, ಅವೆಲ್ಲ ಖೊಟ್ಟಿ ಸಹಿಗಳು ಎಂದರೆ ಸರಿಯಲ್ಲ. ಮೃತ್ಯುಪತ್ರ 4 ಸೆಟಗಳಲ್ಲಿ ಇದ್ದು ಪ್ರತಿ ಸೆಟನಲ್ಲಿ 4 ಪುಟಗಳು ಇದ್ದು ಪ್ರತಿ ಪುಟಗಳಿಗೂ ಶಾಂತಾಬಾಯಿಯವರು ಸಹಿ ಮಾಡಿರುತ್ತಾರೆ. ಸದರಿ 4 ಸೆಟಗಳಲ್ಲಿ 4 ಪುಟಗಳಲ್ಲಿ ಶಾಂತಾಬಾಯಿಯವರು ಸಹಿ ಮಾಡಿಲ್ಲ

ಎಂದರೆ ಸರಿಯಲ್ಲ. ಕಾರ್ಪೂರೇಶನ ಬ್ಯಾಂಕಿನಲ್ಲಿ ನನ್ನ ಖಾತೆ ಇಲ್ಲ. ನನ್ನ ಮತ್ತು ಶಾಂತಾಬಾಯಿಯವರ ಜಂಟಿ ಖಾತೆ ಸಹ ಸದರಿ ಬ್ಯಾಂಕಿನಲ್ಲಿ ಇಲ್ಲ. ಬ್ಯಾಂಕಿನಲ್ಲಿರುವ, ಸಿಟಿ ಸರ್ವೆ ಕಚೇರಿಯಲ್ಲಿ ಕೊಟ್ಟ ವರದಿ ಮತ್ತು ನಿಡಿ-3 ರಲ್ಲಿರುವ ಶಾಂತಾಬಾಯಿಯವರ ಸಹಿಗಳಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ.

3. ನಿಡಿ-3 ರಲ್ಲಿನ ಹಸಿರು ಹಾಳೆಗಳು ಮತ್ತು ಸ್ವಲ್ಪ ಮಸ್ಕಾದ ಹಾಳೆಗಳನ್ನು ಎಲ್ಲಿ ಟೈಪ ಮಾಡಿಸಿದ್ದಾರೆ ನನಗೆ ಗೊತ್ತಿಲ್ಲ. ಅದನ್ನು ವಕೀಲರು ಮಾಡಿಸಿದ್ದಾರೆ. ಬಿಳಿ ಹಾಳೆಯ ಮೇಲಿರುವ ವಕ್ಕಣೆಗಳನ್ನು ಎಲ್ಲಿ ಟೈಪ ಮಾಡಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಸಹಿ ಕೇವಲ 4 ನೇ ಪುಟದಲ್ಲಿ ಮಾತ್ರ ಇದ್ದು ಇನ್ನೊಂದು ಪುಟದಲ್ಲಿ ಇಲ್ಲ ಎಂದರೆ ಸರಿ. ಸುಜೀತ ಅವರದು ಸಹಿತ ಅದೇ ರೀತಿ ಇದೆ ಎಂದರೆ ಸರಿ. ನಿಡಿ-3 ನ್ನು ಬರೆದು ಶಾಂತಾಬಾಯಿಯವರಿಗೆ ಓದಿ ಹೇಳಿಲ್ಲ ಎಂದರೆ ಸರಿಯಲ್ಲ. ನಿಡಿ-3 ಬರೆಯುವ ಕಾಲಕ್ಕೆ ಡಾ-ಉಮರಾಣಿ ಬಂದಿರಲಿಲ್ಲ. ಶಾಂತಾಬಾಯಿಯವರ ಸಹೋದರ ಡಾ-ರಮಣ್ ಸಹ ವೈದ್ಯರು ಎಂದರೆ ಸರಿ. ಶಾಂತಾಬಾಯಿಯವರು ಡಾ-ರಮಣ್ ಇವರ ಮನೆಯಲ್ಲಿ ಮೃತರಾಗಿದ್ದಾರೆ ಎಂದರೆ ಸರಿಯಲ್ಲ. ಶಾಂತಾಬಾಯಿಯವರು ಡಾ-ರಮಣ್ ಇವರಿಗೆ ಮೃತ್ಯುಪತ್ರದ ಬಗ್ಗೆ ಯಾವುದೇ ಮಾಹಿತಿ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ಡಾ-ರಮಣ್‌ರವರ ಸಹಿಯನ್ನು ಮೃತ್ಯುಪತ್ರಕ್ಕೆ ಯಾಕೆ ಪಡೆದಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಡಿ-3 ಬರೆಯುವ ಕಾಲಕ್ಕೆ ಶಾಂತಾಬಾಯಿಯವರ ಮಾನಸಿಕ ಸ್ದಿತಿ ಸರಿಯಾಗಿ ಇರಲಿಲ್ಲ ಎಂದರೆ ಸರಿಯಲ್ಲ. ಶಾಂತಾಬಾಯಿಯವರ ಮಗ ಮತ್ತು ಗಂಡ ಮೃತರಾದ ಕಾರಣ ಖಿನ್ನತೆಗೆ ಒಳಗಾಗಿದ್ದರು ಎಂದರೆ ಸರಿಯಲ್ಲ. ನಿಡಿ-3 ರಂತೆ ಯಾವುದೇ ಮೃತ್ಯುಪತ್ರ ಮಾಡುವ ವಿಚಾರ ಶಾಂತಾಬಾಯಿಯವರಿಗೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು, ಸುಜೀತ ಶಹಾ ಮತ್ತು ಶ್ರೀ.ಟಿ.ಎಲ್.ಕವಟಕೊಪ್ಪ ವಕೀಲರು ಕೂಡಿಕೊಂಡು ಖೊಟ್ಟಿಯಾಗಿ ಸೃಷ್ಠಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಶಾಂತಾಬಾಯಿ ಇವರ ಸಹಿಗಳನ್ನು ಸಹಿ ಖೊಟ್ಟಿಯಾಗಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಿಡಿ-3 ರಲ್ಲಿ ಎರಡು ಪುಟಗಳ ಬಣ್ಣದ ಬದಲಾವಣೆಗಳ ಬಗ್ಗೆ ಯಾವುದೇ ನಮೂದು ಮಾಡಿಲ್ಲ ಎಂದರೆ ಸರಿ. ಗಂಡನ ಮರಣಾನಂತರ ಶಾಂತಾಬಾಯಿಯವರು ಇಸ್ಲಾಂಪೂರದಲ್ಲಿ ಇರುತ್ತಿದ್ದರು, ಜಮಖಂಡಿಯಲ್ಲಿ

ಇರುತ್ತಿರಲಿಲ್ಲ ಎಂದರೆ ಸರಿಯಲ್ಲ. ಮೃತ್ಯುಪತ್ರವನ್ನು 4 ಸೆಟಗಳಲ್ಲಿ ಯಾಕಾಗಿ ಮಾಡಿದ್ದರು ಎಂದರೆ ಸಾಕ್ಷಿ ಮೃತ್ಯುಪತ್ರವನ್ನು 4 ಜನರಿಗೆ ಕೊಡಬೇಕಾಗಿತ್ತು ಆದ ಕಾರಣ 4 ಸೆಟಗಳಲ್ಲಿ ಬರೆಯಲಾಗಿತ್ತು ಆ ಬಗ್ಗೆ ನಿಡಿ-3 ರಲ್ಲಿ ನಮೂದಿಸಿದೆ. ಲಾಕರನಲ್ಲಿ 4 ಸೆಟ ಇರಲಿಲ್ಲ 3 ಸೆಟಗಳು ಮಾತ್ರ ಇದ್ದವು ಎಂದರೆ ಸರಿ. ನಿಡಿ-2/ 8 ಖೊಟ್ಟಿಯಾಗಿ ದೃಢೀಕರಿಸಿ ಕೊಟ್ಟ ಪ್ರಮಾಣ ಪತ್ರ ಎಂದರೆ ಸರಿಯಲ್ಲ. ಲಾಕರನಲ್ಲಿ ಖಾತೆಗೆ ಸಂಬಂಧಿಸಿದ ಪಾಸ್ ಪುಸ್ತಕ ಮತ್ತು ಎಪ್.ಡಿ ರಸೀದಿಗಳು ಇತ್ತು ಎಂಬ ಬಗ್ಗೆ ಮಾಹಿತಿ ನನಗೆ ಇಲ್ಲ. ಶಾಂತಾಬಾಯಿಯವರಿಗೆ ಸಂಬಂಧಿಸಿದ ಪಾಸ್ ಪುಸ್ತಕ ಕೂಡಾ ಇದ್ದ ಬಗ್ಗೆ ನಾನು ವಿಚಾರಿಸಿಲ್ಲ. ಬ್ಯಾಂಕಿನವರು ಹಾಜರಪಡಿಸಿದ ಕಾಗದ ಪತ್ರಗಳನ್ನು ನಾನು ನೋಡಿಲ್ಲ. ಬ್ಯಾಂಕ ಖಾತೆ ಯಾರ ಯಾರ ಹೆಸರಿನಲ್ಲಿ ಇದೆ ಎಂದು ನಾನು ಚೌಕಾಶಿ ಮಾಡಿಲ್ಲ. ಸಾಕ್ಷಿ ಪುನಃ ಹೇಳುವುದು ದಾಖಲೆಗಳನ್ನು ಬ್ಯಾಂಕಿನಿಂದ ಹಾಜರಪಡಿಸಲಾದ ಕಾಗದ ಪತ್ರಗಳನ್ನು ಈಗ ನೋಡಿ ಅವುಗಳ ಝರಾಕ್ಸ ಪ್ರತಿಗಳನ್ನು ಈ ಹಿಂದೆ ನೋಡಿದ್ದೆ ಎಂದು ಹೇಳುತ್ತಾರೆ. ಗ್ರಾಹಕರ ಯಾದಿಯಲ್ಲಿ ಶಾಂತಾಬಾಯಿಯವರ ಹೆಸರು ಕಂಡು ಬರುವುದಿಲ್ಲ ಎಂದರೆ ಸರಿ. ಇನ್ನೊ ಬೇರೆ ಕಾಗದ ಪತ್ರಗಳಲ್ಲಿ ಕಂಡು ಬರುತ್ತದೆ ಎಂದು ಹೇಳುತ್ತಾರೆ. ಸಾಕ್ಷಿಯು 27 ನೇ ಪೇಜದಲ್ಲಿ ಕಂಡು ಬರುತ್ತದೆ ಎಂದು ಹೇಳುತ್ತಾರೆ. 27 ನೇ ಪುಟದಲ್ಲಿ ಶಾಂತಾಬಾಯಿಯವರ ಸಹಿ ಮತ್ತು ಸಮಯದ ವಿವರಗಳು ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಅವು ನಮೂದು ಇವೆ ಎಂದು ಹೇಳುತ್ತಾರೆ. ಬ್ಯಾಂಕಿನ ಕ್ಲರ್ಕ ಸಹಿಯಾಗಲ್ಲಿ ಮ್ಯಾನೇಜರ ಸಹಿ ಇಲ್ಲ ಎಂದರೆ ಸರಿ. ಬ್ಯಾಂಕಿನವರು ನಾನು ಹೇಳಿದ ಪ್ರಕಾರ ಬುಕ್‌ನಲ್ಲಿ ತಯಾರು ಮಾಡಿದ್ದಾರೆ ಎಂದರೆ ಸರಿಯಲ್ಲ. ಪುಟ 27 ರಲ್ಲಿ ಮೂರೇ ಬಾರಿ ಸಹಿಗಳು ಇದ್ದು ಮೂರೇ ವಹಿವಾಟಿಗೆ ಸಂಬಂಧಿಸಿದಂತೆ ಇದ್ದು ಬೇರೆ ಎಲ್ಲಿಯು ಇಲ್ಲ ಎಂದರೆ ಸರಿ. ಅವುಗಳನ್ನು ನಾವು ಮತ್ತು ಬ್ಯಾಂಕಿನವರು ಕೂಡಿಕೊಂಡು ಖೊಟ್ಟಿಯಾಗಿ ತಯಾರು ಮಾಡಿದ್ದೇವೆ ಎಂದರೆ ಸರಿಯಲ್ಲ. ಕಾರ್ಪೊರೇಶನ ಬ್ಯಾಂಕಿನ ಸೇಪ್ ಡೆಪಾಸಿಟ್ ವಾಲ್ಟ ಎಂಟರ್ಸ ಅಂಟೆಡೆನ್ಸ ರಜಿಸ್ಟ್ರರ ದಾಖಲೆಗಳನ್ನು ಬ್ಯಾಂಕಿನಿಂದ ಹಾಜರಪಡಿಸಿದ್ದು ಅದನ್ನು ಈಗ ಸಾಕ್ಷಿಗೆ ತೋರಿಸಿ ಪ್ರಶ್ನೆಗಳನ್ನು ಕೇಳಲಾಗಿ ನಿಪಿ-11 ಅಂತಾ ಪುಟ – 7 ನ್ನು ನಿಪಿ-11 ಎ ಎಂದು ಗುರುತಿಸಿದ್ದು, ಅವುಗಳಲ್ಲಿನ ಮೂವರು ನಮೂದನೆಗಳನ್ನು 11 ಎ 1, 11 ಎ 2, 11 ಎ 3 ಅಂತಾ ಗುರುತಿಸಲಾಯಿತು. ಅದರಲ್ಲಿರುವ ಲೆಂತ್, ಸೈಜ್, ಮಶೀಯ ವಯಸ್ಸು, ಸ್ಟ್ರೋಕ ಇವುಗಳಿಗೂ

ಹಾಗೂ ನಿಡಿ-3 ರಲ್ಲಿ ವ್ಯತ್ಯಾಸ ಕಂಡು ಬರುತ್ತದೆ ಎಂದರೆ ಸಾಕ್ಷಿಯು ನನಗೆ ಹೇಳಲು ಬರುವುದಿಲ್ಲ ಎಂದು ಹೇಳುತ್ತಾರೆ.

4. ಸದರಿ ಮೃತ್ಯುಪತ್ರ ನಿಡಿ-3 ರಲ್ಲಿ ನನಗೆ ಒಂದು ಲಕ್ಷ ರೂಗಳ ಸೌಲಭ್ಯವನ್ನು ಕೊಡಲಾಗಿದೆ ಎಂದರೆ ಸರಿ. ಅದೇ ರೀತಿ ಸುಜೀತ ಶಹಾಗೂ ಸಹ ಒಂದು ಲಕ್ಷ ರೂಗಳ ಸೌಲಭ್ಯ ಕೊಡಲಾಗಿದೆ ಎಂದರೆ ಸರಿ. ನನ್ನನ್ನು ಎಕ್ಸಿಕ್ಯೂಟರ್ ಅಂತಾ ನೇಮಕ ಮಾಡಲು ಹೇಳಿ ವಕೀಲರಿಗೆ ಹೇಳಿ ಬರೆಸಿದ್ದೇನೆ ಎಂದರೆ ಸರಿಯಲ್ಲ. ನಿಡಿ-3 ಸಂಪೂರ್ಣವಾಗಿ ಸಂಶಯಾಸ್ಪದದಲ್ಲಿ ಮುಳುಗಿದೆ ಎಂದರೆ ಸರಿಯಲ್ಲ. ನಿಡಿ-3 ನ್ನು ಶಾಂತಾಬಾಯಿಯವರ ಆರೋಗ್ಯ ಚೆನ್ನಾಗಿರುವಂತೆ ಸುಳ್ಳು ತೋರಿಸಿದ್ದೇನೆ ಎಂದರೆ ಸರಿಯಲ್ಲ. ನಿಡಿ-3 ಮಾಡುವಾಗ ಶಾಂತಾಬಾಯಿಯವರಿಗೆ ಆರೋಗ್ಯ ಸ್ಥಿತಿ ಸರಿ ಇರಲಿಲ್ಲ ಎಂದರೆ ಸರಿಯಲ್ಲ. ನಿಡಿ-3 ರ ಬಗ್ಗೆ ಶಾಂತಾಬಾಯಿಯವರಿಗೆ ಯಾವುದೇ ಮಾಹಿತಿ ಇರಲಿಲ್ಲ ಎಂದರೆ ಸರಿಯಲ್ಲ. ನಿಡಿ-3 ರ ಪರಿಣಾಮದ ಬಗ್ಗೆಯೂ ಶಾಂತಾಬಾಯಿಯವರಿಗೆ ಮಾಹಿತಿ ಇರಲಿಲ್ಲ ಎಂದರೆ ಸರಿಯಲ್ಲ.

ಶ್ರೀ.ಎಮ್.ಜಿ.ಕೆ ವಕೀಲರು ಮುಂದುವರೆದ ಪಾಟೀ ಸವಾಲು ಮಾಡಲು ಸಮಯವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

ಸಾಕ್ಷಿಗೆ ಅನುವಾದಕರಾದ ಶ್ರೀ.ವಿ.ವಿ.ಲಾಡ್ ವಕೀಲರು ಸಾಕ್ಷ್ಯವನ್ನು ಸಾಕ್ಷಿಗೆ ಮರಾಠಿ ಭಾಷೆಯಲ್ಲಿ ಓದಿ ಹೇಳಿರುತ್ತಾರೆ ಸಾಕ್ಷ್ಯವನ್ನು ಕೇಳಿ ಸರಿ ಇರುತ್ತವೆ ಎಂದು ಸಾಕ್ಷಿಯು ಸಹಿ ಮಾಡಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)
ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿ ರುವರು.

ಸಹಿ/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ

ಸಾಕ್ಷಿಯ ಸಹಿ